ಕೇಳಿರಬಹುದೆ? ಬದುಕಿನ ಈ ನಿಜಕ್ಷಣ ಬಿಟ್ಟು ಕಾಣದ ಕಲ್ಪನೆಗೆ ಜಿಗಿಯುವುದು ಪ್ರೀತಿಯ ಮೇಲೆ ಅವಭರವಸೆಯ ಮಾತಾಗಿ ಕೇಳಿಸಿತೆ? ಪ್ರೇಮದ ಸಫಲತೆ ಅಥವಾ ವಿಫಲತೆಗಳನ್ನು ತಾರ್ಕಿಕ ಚೌಕಟ್ಟಿನಲ್ಲಿ ಯಶಸ್ವಿ ಕಥೆಯಾಗಿಸಿದವನಿಗೆ ಅದರ ಅತಾರ್ಕಿಕ ಮುಖಗಳನ್ನು ಕಾಣಿಸುವ ಹುನ್ನಾರು ಇರಬಹುದೆ ನಿಮ್ಮದು? ತರ್ಕಸಮ್ಮತವೋ ತರ್ಕಾತೀತವೋ, ಏನಾದರೂ, ಯಾವುದಾದರೂ ಉತ್ತರವನ್ನು ಹೇಳಿ ಹೋಗಬಹುದಿತ್ತಲ್ಲ ಕುಸುಮ... ಯಾಕೆ, ಯಾಕೆ ಹೀಗೆ ಮಾಡಿದಿರಿ ಕುಸುಮ?

ಅದೆಷ್ಟೋ ಕರೆ ಸಂದೇಶಗಳಿಗೆ ಉತ್ತರಿಸದಿದ್ದವಳು ಈ ಕಾಗದಕ್ಕೆ ಉತ್ತರಿಸುವಳಾ? ಶಾಂತಾರಾಮ ಕಾಗದವನ್ನು ಹರಿದೆಸೆದ.

ಬರೆಯುವ ಧ್ಯಾನದಲ್ಲಿ ಸೂರ್ಯ ಕಂತಿದ್ದು ಶಾಂತಾರಾಮನ ಗಮನಕ್ಕೇ ಬರಲಿಲ್ಲ. ಮನೆಗೆ ಮರಳುವುದೇ ಬೇಡ ಎಂಬಂತೆ ಕೂತಿದ್ದ. ಒಂಟಿ ನೀರ ಹಕ್ಕಿಯೊಂದು ಆಕ್ರಂದನದ ಧ್ವನಿಯಲ್ಲಿ ಕೂಗುತ್ತಿತ್ತು. ಪ್ಲಾಟ್‌ಫಾರ್ಮಿನ ತುದಿ ಇಳಿಜಾರಿನಿಂದ ಏಡಿಯೊಂದು ಸಿಮೆಂಟಿನ ನೆಲದಲ್ಲಿ ಕೊರಕೊರ ಶಬ್ದ ಮಾಡುತ್ತಾ ಮೇಲೇರಿ ಬರುತ್ತಿತ್ತು. ಅಭಿವೃದ್ಧಿಯ ದಾಳಿಯಲ್ಲಿ ಸಂಗಾತಿಯನ್ನೂ ನೆಲೆಯನ್ನೂ ಕಳೆದುಕೊಂಡ ಜೀವಿಗಳ ಒಡಲನೋವಿನ ಶಾಪವು ನಮ್ಮನ್ನು ಭಾವನಾತ್ಮಕವಾಗಿ ಒಂಟಿಗಳನ್ನಾಗಿಸಿರಬಹುದು ಎಂದು ಅವನಿಗೆ ಅನಿಸಿತು. ಏದುಸಿರು ಬಿಡುತ್ತಾ ಬರುವ ಏಡಿಯನ್ನು ನೋಡಿ ಕನಿಕರವೆನಿಸಿ ಅದನ್ನು ಹಿಡಿದು ದೂರದ ಪೊದೆಕಂಟಿಗಳಲ್ಲಿ ಬಿಡುವ ಮನಸಾಯಿತು. ಎದ್ದು ಅತ್ತ ಹೋದ. ತುಸು ಹಸಿರು ಚಿಪ್ಪಿನ ಮೈ ಸುಂದರವಾಗಿತ್ತು. ಹೆಣ್ಣು ಏಡಿ ಇರಬಹುದು ಎನಿಸಿತು. ಅದು ಹೇಗೋ ಕೊಂಬು ಹಿಡಿದ. ಆದರೆ ರಕ್ಷಣೆಯ ತಂತ್ರವಾಗಿ ಕೊಂಬು ಕಳಚುವ ಸಾಧ್ಯತೆಯಿದ್ದರಿಂದ ತಕ್ಷಣವೇ ಬೆನ್ನು ಭಾಗವನ್ನು ಗಟ್ಟಿಯಾಗಿ ಹಿಡಿದು ಹಳಿಗುಂಟ ನಡೆದು ದೂರದಲ್ಲಿ ಗಿಡಕಂಟಿಗಳ ನಡುವೆ ಬಿಡಬೇಕೆನ್ನುವಾಗ ಸಡಿಲುಗೊಂಡ ಕ್ಷಣದಲ್ಲಿ ಅವಕಾಶ ನೋಡಿ ಅವನ ಕೈ ಬೆರಳನ್ನು ಕಚ್ಚಿತು. ಗಾಬರಿಯಾಗಿ ಅವನು ಕೈಕೊಡಹಿದ ಪರಿಗೆ ಏಡಿ ದೂರದಲ್ಲಿ ಕಣ್ಣಿಗೆ ಕಾಣದಲ್ಲಿ ಬಿತ್ತು.

